ಒಂದು ದಿನ ಸಂಜೆ ಹತ್ತಿರದಲ್ಲಿ ಸೇವಕರಿರಲಿಲ್ಲ. ಬಾಬಾ ಕೈಗೆ ನೀರು ಹಾಕಲು ಕರೆಯುತ್ತಿದ್ದಾರೆ. ಭಕ್ತ ಒಂದು ಬಿಂದಿಗೆಯಿಂದ ಅವರ ಕೈಗೆ ಹಾಕಲು ಹೋದ. ನೀರು ಕೊಟ್ಟಾದ ಮೇಲೆ ಬಾಬಾ ಹೇಳತೊಡಗಿದರು(ಬಿಂದಿಗೆ ಯನ್ನು ಹಿಡಿದು ತೋರಿಸುತ್ತ) :

‘‘ಬಿಂದಿಗೆಯನ್ನು ಈ ರೀತಿ ಹಿಡಿದು ನೀರು ಹಾಕಬೇಕು. ಹೊರಗಡೆ ಹಿಡಿಯಬೇಕು, ಬಿಂದಿಗೆಯ ಒಳಗೆ ಕೈಯನ್ನು ಅದ್ದಬಾರದು. ಚಿಕ್ಕ ಪುಟ್ಟ ಕೆಲಸಗಳನ್ನು ತಪ್ಪಿಲ್ಲದೆ ಮಾಡಬೇಕು. ಬಾಹ್ಯ ಕೆಲಸ ಹೇಗಾದರೂ ಮಾಡಿದರಾಯಿತು, ಎಂದಲ್ಲ. ಎಲ್ಲ ಕೆಲಸಗಳನ್ನೂ ಸಾವಧಾನವಾಗಿ ಮಾಡಬೇಕು. ಯಾವಾಗ, ಯಾವ ಕೆಲಸವೇ ಆಗಲಿ, ಮನಸ್ಸನ್ನೆಲ್ಲ ಅದರಲ್ಲಿಡಬೇಕು, ಹಾಗೂ ಅದೇ ಸಾಧನೆಯೆಂದು ತಿಳಿಯಬೇಕು – ಅದೇ ಆತನನ್ನು ಪಡೆಯುವ ಬಗೆ. ಢಾಕಾದ ಡಾ.ಗಾಂಗೂಲಿ ತೋಟದ ಮಣ್ಣನ್ನು ಅಗೆಯುತ್ತಾರೆ, ಹೂಗಿಡಗಳಿಗೆ ನೀರು ಹಾಕುತ್ತಾರೆ. ‘ಇದು ಠಾಕೂರರ ತೋಟ, ಅದಕ್ಕೆ ನೀರು ಹಾಕುತ್ತಿದ್ದೇನೆ, ಗಿಡ ಬೆಳೆಯುತ್ತದೆ, ಹೂವಾಗುತ್ತದೆ, ಆ ಹೂವಿನಿಂದ ಠಾಕೂರರ ಪೂಜೆ ಮಾಡಬಹುದು’ ಎಂಬ ಭಾವದಿಂದ ಅವರು ಮಾಡುತ್ತಿದ್ದಾರೆ. ಅವರಿಗೆ ಸದಾ ಇದೇ ಚಿಂತನೆ. ಜಪಧ್ಯಾನವೆಂದರೆ ಇದೇ; ಇದೇ ಸಾಧನೆ – ಭಜನೆ.

ಒಂದು ದಿನ ಬಾಬಾ ಒಬ್ಬರೇ ಹಾಡುತ್ತಿದ್ದಾರೆ :

**ಹಾಸ್‌ಮುಖ್ ತೇರಾ ಕೊರ್‌ಲೊ ಕೀ ಗುಣ್ ।**
**ಅಂದರ್ ಜ್ವಾಲ್ ರಹಾ ಇಷ್‌ಕ್ ಆಗುನ್ ॥**

(ನಿನ್ನ ನಗೆಮೊಗವು ನನಗೇನು ಮಾಡಿಬಿಟ್ಟಿದೆ! ನನ್ನೊಳಗೆ ಪ್ರೇಮಜ್ವಾಲೆಯು ಉರಿಯುತ್ತಿದೆ.) ಭಕ್ತರು, ಸೇವಕರು ಬಳಿಸಾರಿದಾಗ ಹೇಳಿದರು – ಇಷ್ಕ್ ಎಂದರೆ love (ಪ್ರೇಮ). ಈ ಹಾಡನ್ನು ಪ್ರೇಮಿಯೊಬ್ಬ ತನ್ನ ಪ್ರಿಯತಮೆಗೆ ಹಾಡಿದ್ದ – ಪಶ್ಚಿಮದ ಒಂದು ಶಹರಿನಲ್ಲಿ. ಅದು ನನ್ನ ಕಿವಿಗೆ ಬಿದ್ದಾಗ, ನನ್ನ ಮನಸ್ಸಿಗೆ ಅದು ಬೇರೆ ರೀತಿ ಅರ್ಥವಾಯಿತು. ನಾನಂದುಕೊಂಡೆ – ನಿಜವಾಗಿಯೂ, ನಗುಮುಖ ಇನ್ನಾರಿಗಿದೆ? ಠಾಕೂರರಿಗೆ ಮಾತ್ರ ನಗುಮುಖವಿರುವುದನ್ನು ನಾನು ನೋಡಿದ್ದೇನೆ.

ಸಂಜೆ ವರಾಂಡದಲ್ಲಿ ಭಕ್ತರ ತಂಡವೊಂದು ಕಲೆತಿದೆ. ಒಬ್ಬರು ಪ್ರಶ್ನಿಸಿದರು: ‘‘ನೀವು ಟಿಬೆಟ್ಟಿಗೆ ಹೋದದ್ದೇಕೆ? ಅಲ್ಲಿನ ವಿಷಯಗಳೇನೇನು?’’ ಇತ್ಯಾದಿ. ಬಾಬಾ ಹೇಳಿದರು, ‘‘ಟಿಬೆಟ್ಟಿಗೆ ಹೋದದ್ದೇಕೆ? ಠಾಕೂರರು ಹೊರಟುಹೋದ ಮೇಲೆ ಎಲ್ಲೂ, ಏನೂ ಇಷ್ಟವಾಗುತ್ತಿರಲಿಲ್ಲ. ಎಲ್ಲಿಗೆ ಹೋದರೆ ಅವರು ಮತ್ತೆ ಸಿಗುವರೆಂದು ಸದಾ ಭಾವಿಸುತ್ತಿದ್ದೆ. ಹಿಮಾಲಯಕ್ಕೆ ಹೋದರೆ ಅವರು ನಿಶ್ಚಯವಾಗಿ ಸಿಗುತ್ತಾರೆ, ಹಿಮಾಲಯ ಭಗವಂತನ ಸ್ಥಾನ ಎಂದೆನಿಸುತ್ತಿತ್ತು. ಕೈಲಾಸ, ಮಾನಸ ಸರೋವರ, ಕೇದಾರ – ಬದರಿ ಎಂದು ಬಾಲ್ಯದಿಂದಲೂ ಕೇಳಿ, ದೊಡ್ಡವನಾದ ಮೇಲೆ ಅಲ್ಲಿಗೆ ಹೋಗಿ ಬಿಡೋಣ ಅನ್ನಿಸುತ್ತಿತ್ತು. ಟಿಬೆಟ್ಟಿನಲ್ಲಿ ಈಗಲೂ ದೊಡ್ಡ ದೊಡ್ಡ ಬೌದ್ಧ ಮಠಗಳಿವೆಯೆಂದು ಕೇಳಿದ್ದೆ. ನೋಡಲು ಬಹಳ ಆಸೆಯಾಗುತ್ತಿತ್ತು. ಹಿಮಾಲಯ – ಒಂದಾದ ಮೇಲೊಂದು ಪರ್ವತಗಳು, ಚಿರ ತುಷಾರಾವೃತ. ಇಡೀ ವರ್ಷದಲ್ಲಿ ಯಾವತ್ತೂ ಅಲ್ಲಿನ ಹಿಮ ಕರಗುವುದಿಲ್ಲ– ಕಣ್ಣು ಕೋರೈಸುವ ಶ್ವೇತವರ್ಣ, ಸ್ತಬ್ಧ. ಹಿಮದ ಮೇಲೆಯೇ ಎಷ್ಟು ದಿನಗಳು ಕಳೆದವು! ಆನಂದವಾಗುತ್ತಿತ್ತು. ಸುತ್ತಲೂ ನೋಡುವಾಗ ಎಷ್ಟೋ ದಿನಗಳಿಂದ ಪರಿಚಯವಿದ್ದು ಬಿಟ್ಟುಬಂದ ಸ್ಥಳ ಅನ್ನಿಸುತ್ತಿತ್ತು.

ಟಿಬೆಟ್ಟಿನಲ್ಲಿ ಹಿಮದಿಂದ ನನ್ನನ್ನೆತ್ತಿ ಬಹುಶಃ ನಗ್ನಾವಸ್ಥೆಯಲ್ಲಿ ಬೌದ್ಧಮಠಕ್ಕೆ ಕರೆದುಕೊಂಡು ಹೋಗಿದ್ದರು. ಹಿಮದಲ್ಲಿ ಮರಗಟ್ಟಿ ಹೋಗಿದ್ದೆ. ನೀವೆಲ್ಲ ಶಿಷ್ಯ ಸಂತಾನರು, ನಿಮಗೆ ಹೇಳಿ ಏನು ಲಾಭ? ಶರೀರದ ಲಕ್ಷಣವನ್ನು ನೋಡಿ ಅವರೆಂದರು ‘ಗೇ–ಲಾಮ್’ ಅರ್ಥಾತ್ ಆಕುಮಾರ ಬ್ರಹ್ಮಚಾರಿ. ಅವರ ದೇಶದಲ್ಲಿ ‘ಗೇ–ಲಾಮ್’ ಎಂದರೆ ಭಾರೀ ಗೌರವ. ನನಗೆಂದರು, ‘ಇಲ್ಲಿಯೇ ಇದ್ದುಬಿಡಿ’ ಅಂತ. ಠಾಕೂರರ ಚಿತ್ರವನ್ನು ನನ್ನಿಂದ ತೆಗೆದುಕೊಂಡು ವೇದಿಕೆಯ ಮೇಲಕ್ಕೆ ಬುದ್ಧನ ಬಳಿ ಅದನ್ನಿಟ್ಟು ಆರತಿ ಮಾಡಿದರು. ಕೇಳಿದರು, ‘ಈತ ಯಾರು? ಈ ಕಣ್ಣುಗಳು ಮನುಷ್ಯರದಲ್ಲ. ಇವನು ಭಗವಂತ, ಇವನು ಬುದ್ಧ.’ ಕೊನೆಗೆ ಚಿತ್ರವನ್ನು ಕೊಟ್ಟರು. ಒಂದೊಂದು ಬೌದ್ಧ ಮಠದಲ್ಲಿ ೪,೦೦೦ – ೭,೦೦೦ ಮಂದಿ ಸಾಧುಗಳು ಇದ್ದರು. ಅಲ್ಲಿ ಚಹಾಗೆ ನೀರು ಕುದಿಸುತ್ತಲೇ ಇದ್ದರು. ಇದು ಎಲೆಯ ಚಹಾ ಅಲ್ಲ – ಟ್ಯಾಬ್ಲೆಟ್ ಚಹಾ. ಬಿಸಿನೀರು ತೆಗೆದುಕೊಂಡು ಇಷ್ಟ ಬಂದಾಗ, ಇಷ್ಟ ಬಂದಷ್ಟು ಕುಡಿಯುವುದು. ಚಹಾ ಕುಡಿಯದಿದ್ದರೆ ಮೈಕೈ ಮರಗಟ್ಟಿ ಹೋಗುವುದು. ಮಧ್ಯದಲ್ಲಿ ಬೆಂಕಿ ಉರಿಯುತ್ತಿದೆ – ಚಹಾದ ನೀರು ಕುದಿಯುತ್ತಿದೆ. ನಾಲ್ಕು ದಿಕ್ಕುಗಳಲ್ಲೂ ಗೋಡೆಗಳಲ್ಲಿ ಇಟ್ಟಿಗೆಯಿಂದ ಕಟ್ಟಿಸಿದ ಕುರ್ಚಿಗಳಂತೆ ಧ್ಯಾನದ ಆಸನಗಳು. ಚಹಾ ಕುಡಿಯುತ್ತಾರೆ, ಸ್ವಲ್ಪ ಮಾಂಸ ತಿನ್ನುತ್ತಾರೆ, ಮತ್ತೆ ಧ್ಯಾನಕ್ಕೆ ಕುಳಿತುಕೊಳ್ಳುತ್ತಾರೆ.

ನಾನು ಟಿಬೆಟ್ಟಿನ ಭಾಷೆಯನ್ನು ಕಲಿತುಬಿಟ್ಟಿದ್ದೆ. ಅಲ್ಲಿನ ಮಹಿಳೆಯರು ಹೇಳುತ್ತಿದ್ದರು, ‘ನಿನಗೆ ತಾಯಿ, ಸೋದರಿಯರು ಯಾರೂ ಇಲ್ಲವೆ? ಒಳ್ಳೆಯದು, ಇಲ್ಲಿಯೇ ಮದುವೆ ಮಾಡಿಕೊಳ್ಳಬಾರದೇಕೆ?’ ನಾನೆನ್ನುತ್ತಿದ್ದೆ, ‘ನೀವೆಲ್ಲರೂ ನನ್ನ ತಾಯಂದಿರು. ಯಾರನ್ನು ಮದುವೆಯಾಗಲಿ, ಹೇಳಿ. ನಾನು ಸಂನ್ಯಾಸಿ. ತಾಸಿ ಲಾಮಾ political head (ರಾಜಕೀಯ ಮುಖಂಡ), ದಲಾಯ್ ಲಾಮಾ spiritual head (ಆಧ್ಯಾತ್ಮಿಕ ಮುಖಂಡ). ಆ ಪಂಗಡವೇ spiritual – ಯಾವ ಲಾಮಾ ಯಾವಾಗ ಮೃತರಾದರೆಂದು ತಿಳಿದುಕೊಂಡಿರುತ್ತಾರೆ. ಅವರೆಲ್ಲಿ ಹುಟ್ಟುತ್ತಾರೆಂದು ತಿಳಿದುಕೊಂಡು, ಅವರನ್ನು ಕರೆದುಕೊಂಡು ಬಂದು ಲಾಮಾ ಪದವಿಯನ್ನು ನೀಡುತ್ತಾರೆ – ಅವರೆಷ್ಟು ಚಿಕ್ಕವರೇ ಆಗಿರಲಿ. ಒಬ್ಬ ‘ಆಭಿ’ ಇರುತ್ತಾರೆ – ಅವರೇ ಎಲ್ಲವನ್ನೂ ಮಾಡುತ್ತಾರೆ. ಒಮ್ಮೆ ಬ್ರಿಟಿಷ್ ರೀಜೆಂಟರೊಂದಿಗೆ ಮಾತುಕತೆಯಾಗುತ್ತಿದೆ, ಆಭಿ ಎಲ್ಲವನ್ನೂ ತಿಳಿಸಿ ಕೊಡುತ್ತಿದ್ದಾರೆ. ೧೮ ತಿಂಗಳು ವಯಸ್ಸಿನ ಲಾಮಾ ಕತ್ತನ್ನಾಡಿಸಿ approval (ಒಪ್ಪಿಗೆ) ಅಥವಾ disapproval (ಅಸಮ್ಮತಿ) ಸೂಚಿಸುತ್ತಿದ್ದಾರೆ. ಅವರು ಜಾತಿಸ್ಮರರಾಗಿರುತ್ತಾರೆ. ಪೂರ್ವಜನ್ಮದ ಎಲ್ಲಾ ವಿಷಯಗಳೂ ಅವರಿಗೆ ನೆನಪಿರುತ್ತದೆ. ❖

*(ಮುಂದುವರಿಯುವುದು)*

# ಆಧ್ಯಾತ್ಮಿಕ ಸಂಭಾಷಣೆ



## ಸ್ವಾಮಿ ಭೂತೇಶಾನಂದಜೀಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ

**ಪ್ರಶ್ನೆ:** ವೈಶಾಖ ಮಾಸವನ್ನು thrice blessed day (ಮೂರು ಸಲ ಅನುಗ್ರಹಿಸಲ್ಪಟ್ಟದ್ದು) ಎಂದು ಏಕೆ ಹೇಳುತ್ತಾರೆ ಮಹಾರಾಜ್?

**ಮಹಾರಾಜ್:** ಭಗವಾನ್ ಬುದ್ಧನ ಜನನ, ಜನ್ಮ, ಜ್ಞಾನೋದಯ ಮತ್ತು ಮಹಾಸಮಾಧಿ ಆ ದಿನವೇ ಉಂಟಾಯಿತು.

**ಪ್ರಶ್ನೆ:** ಆರ್ಯ ಸತ್ಯಗಳೆಂದು ಏಕೆ ಹೇಳಲಾಗುತ್ತದೆ?

**ಮಹಾರಾಜ್:** ಆರ್ಯರಿಂದ ಪರೀಕ್ಷಿಸಿದ ಸತ್ಯ. ಇಲ್ಲಿ ಆರ್ಯ ವೆಂದರೆ ಒಂದು ಜಾತಿ, ಜನಾಂಗವಲ್ಲ, ಪೂಜ್ಯರು ಯಾರೋ ಅವರು ಆರ್ಯರು. ಒಬ್ಬರು ಸಾಧುಗಳ ಆರೋಗ್ಯವನ್ನು ವಿಚಾರಿಸುತ್ತ ಪೂಜ ನೀಯ ಹರಿ ಮಹಾರಾಜರು (ಸ್ವಾಮಿ ತುರೀಯಾನಂದರು), 'ಶರೀರಕ್ಕೆ ತಿಳಿದಿರುವುದು ದುಃಖವೊಂದೆ. ಹೇ ಮನಸ್ಸೇ, ನೀನು ಆನಂದದಲ್ಲಿರು' ಎಂದರು. ಶ್ರೀರಾಮಕೃಷ್ಣರ ಈ ಮಾತನ್ನು ಹರಿ ಮಹಾರಾಜರು ಬಾರಿ ಬಾರಿಗೂ ಹೇಳುತ್ತಿದ್ದರು. ಶ್ರೀರಾಮಕೃಷ್ಣರು ಹೀಗೆ ಬೇರೆ ಯಾರಿಗಾದರೂ ಈ ಮಾತನ್ನು ಹೇಳುತ್ತಿದ್ದರೋ ಇಲ್ಲವೋ ಎಂಬುದರ ಉಲ್ಲೇಖವಿಲ್ಲ.

**ಪ್ರಶ್ನೆ:** ಮಹಾರಾಜ್, ನಿರ್ವಾಣ ಎಂದರೇನು?

**ಮಹಾರಾಜ್:** 'ನಾನೇ ದೇಹ' ಎಂಬ ಬುದ್ಧಿಯಿಂದ ನಿವೃತ್ತಿ; ಚಿತ್ತವೃತ್ತಿ, ಭೋಗೇಚ್ಛೆ, ಆಸೆ ಆಕಾಂಕ್ಷೆಗಳಿಂದ ನಿವೃತ್ತಿ. ಇದರಿಂದ 'ನಾನು, ನಾನು' ಎಂಬುದು ಕೊನೆಗೊಳ್ಳುತ್ತದೆ. ದೀಪವು ಆರಿ ಹೋಗುತ್ತದೆ.

**ಪ್ರಶ್ನೆ:** ಹಾಗಾದರೆ ಏನು ಉಳಿಯಿತು?

**ಮಹಾರಾಜ್:** ಏನೂ ಉಳಿಯುವುದಿಲ್ಲ. ನಿನಗೆ 'ನಾನು' ಎಂಬುದು ಉಳಿಯಬೇಕೇನು?

**ಪ್ರಶ್ನೆ:** 'ನಾನು' ಇಲ್ಲದೆ ಹೋದರೆ ಯಾರಿಗೆ ಲೋಪವಾಯಿತು?

**ಮಹಾರಾಜ್:** ಸಾಧಕರಿಗೆ. ಯಾರು ಈ ದಾರಿಯಲ್ಲಿ ನಡೆಯುತ್ತಾರೋ ಅವರಿಗೆ.

**ಪ್ರಶ್ನೆ:** ಸಾಧಕರಿಲ್ಲದಿದ್ದರೆ ನಿರ್ವಾಣ ಯಾರಿಗೆ?

**ಮಹಾರಾಜ್:** ಉರಿಯುವ ದೀಪವು ಆರಿಹೋದಾಗ ನಿರ್ವಾಣವಾಗುತ್ತದೆ. ಭೋಗೇಚ್ಛೆ ಎಂಬ ಎಣ್ಣೆಯ ಮೂಲಕ ದೀಪವು ಉರಿಯುತ್ತಿತ್ತು. ಎಣ್ಣೆ ಮುಗಿಯಿತು ಎಂದರೆ ದೀಪ ಆರಿತು ಎಂದರ್ಥ.

**ಪ್ರಶ್ನೆ:** ಇದು ನೊಣವನ್ನು ಕೊಲ್ಲುವ ಬದಲು ಮನುಷ್ಯನನ್ನು ಕೊಂದ ಹಾಗಾಯಿತು.

**ಮಹಾರಾಜ್:** ನೀನು ಸಂಕುಚಿತ ದೃಷ್ಟಿಕೋನದಿಂದ ನೋಡುತ್ತಿದ್ದೀ. ಅಂದರೆ ನೀನು ಮನುಷ್ಯನನ್ನು ಬದುಕಿಸಲು ನೋಡುತ್ತೀಯ. ಇದರರ್ಥ, ಭೋಗೇಚ್ಛೆಯ ನಿರ್ವಾಣದಿಂದ ಎಲ್ಲ ವಾಸನೆಗಳೂ ಹೊರಟುಹೋಗುತ್ತವೆ.

**ಪ್ರಶ್ನೆ:** ಹಾಗಾದರೆ ನಿರ್ವಾಣ ಯಾರಿಗೆ?

**ಮಹಾರಾಜ್:** 'ಸತ್ಯವಿದೆಯೆ?' ಇದು ಯಾರಾದರೂ ಕೇಳುವ ಪ್ರಶ್ನೆಯಾಗಿದ್ದರೆ ಆಗ ನಿರ್ವಾಣವು ಯಾರಿಗೆ ಎಂಬ ಪ್ರಶ್ನೆ ಬರುತ್ತದೆ. ಯಾವುದಕ್ಕೆ 'ದೀಪಶಿಖೆ' ಎನ್ನುವೆವು? ಉರಿಯುವ ದೀಪದ ಕುಡಿಗಳೇ ಆಸೆ-ಆಕಾಂಕ್ಷೆಗಳು. ದೀಪಶಿಖೆಗಳು ಆರಿ ಹೋದರೆ ಏನು ಉಳಿಯಿತು? ಮನುಷ್ಯನಿಗೆ ಏನು ಬೇಕು? ದುಃಖದ ನಿವೃತ್ತಿ. ಯಾರ ದುಃಖದ ನಿವೃತ್ತಿ? ಯಾರು ದುಃಖ, ಬಂಧನಗಳಲ್ಲಿದ್ದಾರೋ ಆತನಿಗೆ ದುಃಖದಿಂದ ನಿವೃತ್ತಿ ಬೇಕು. ಯಾರ ದುಃಖ ಹೊರಟು ಹೋಯಿತೋ ಅಲ್ಲಿ ದುಃಖವೆಲ್ಲಿ ನಿಲ್ಲುತ್ತದೆ?

**ಪ್ರಶ್ನೆ:** 'ನಾನು' ಎಂಬುದರ ನಾಶವನ್ನು ಮನುಷ್ಯ ಬಯಸುತ್ತಾನೆಯೆ?

**ಮಹಾರಾಜ್:** ಸಾಮಾನ್ಯ ಜನರು ಈ ಸಂಸಾರದ ಆನಂದವನ್ನು ಸವಿಯಲು ಇಷ್ಟಪಡುತ್ತಾರೆ. ಹಾಗಾಗಿ ಈ 'ನಾನು' ಎನ್ನುವುದು ಜೀವಂತ ಉಳಿಯುತ್ತದೆ. ಯಾರು 'ನಾನು' ಎಂಬ ಈ ಬಂಧನದ ಅರ್ಥವನ್ನು ತಿಳಿಯುತ್ತಾನೋ ಆತನ ಬಂಧನಗಳೆಲ್ಲ ಹೊರಟು ಹೋಗುತ್ತವೆ. ನಾನು, ನೀನು ಯಾವುದೂ ಉಳಿಯುವುದಿಲ್ಲ. ಬ್ರಹ್ಮಸ್ವರೂಪದಲ್ಲಿ ನಾನು-ನೀನು ಯಾವುದೂ ಉಳಿಯುವುದಿಲ್ಲ.

**ಪ್ರಶ್ನೆ:** ಅನಂತ ಜೀವನದ ಬಗ್ಗೆ ಹೇಳಲಾಗಿದೆ, ಅದು ಯಾರಿಗೆ?

**ಮಹಾರಾಜ್:** ಸಾಧಕರಿಗೆ. ಸಾಧಕನು 'ನಾನೇ ಬ್ರಹ್ಮ' ('ಅಹಂ ಬ್ರಹ್ಮಾಸ್ಮಿ') ಎಂದು ಚಿಂತಿಸುತ್ತಿದ್ದರೆ, 'ನಾನು' ಹೊರಟುಹೋಗಿ ಬ್ರಹ್ಮವೇ ಉಳಿಯುತ್ತದೆ.

**ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ ।**
**ಏವಂ ಮುನೇರ್ವಿಜಾನತ ಆತ್ಮಾ ಭವತಿ ಗೌತಮ ॥** *(ಕಠ, ೨.೧.೧೫)*

ಹೇಗೆಂದರೆ, ಒಂದು ಬಿಂದು ಶುದ್ಧಜಲವನ್ನು ಶುದ್ಧವಾದ ಜಲ ರಾಶಿಗೆ ಹಾಕಿದರೆ ಅದರಲ್ಲಿ ಆ ಬಿಂದು ಒಂದಾಗಿ, ಹುಡುಕಿದರೂ ಸಿಗದ ಹಾಗೆ ಜ್ಞಾನಿ ಅಥವಾ ಬ್ರಹ್ಮಜ್ಞಾನಿಯ 'ನಾನು' ಎಂಬ ರೂಪದ ಬಂಧನ ಕಳಚಿ, ಬ್ರಹಜ್ಞಾನಿಯಾಗುತ್ತಾನೆ. ಬ್ರಹ್ಮಜ್ಞನಲ್ಲ, ಬ್ರಹ್ಮಸ್ವರೂಪದ ಸ್ಥಿತಿಯಲ್ಲಿರುತ್ತಾನೆ; ಬ್ರಹ್ಮಸ್ಥಿತಿಯಲ್ಲಿರುತ್ತಾನೆ. ಆರೋಪವೆಲ್ಲ ಹೊರಟುಹೋಗುತ್ತದೆ. ಇದೇ ಶಂಕರಾಚಾರ್ಯರ ಗ್ರಂಥದಲ್ಲಿರುವುದು. ಅವಿದ್ಯೆ (ಭ್ರಾಂತಿ, ಅಜ್ಞಾನ) ಯಾರದು? ಅವಿದ್ಯೆ ಯಾರದೋ ಆತನದೆ. 'ನಾನು' ಎಂಬುದೇ ಅವಿದ್ಯೆಯಲ್ಲಿ ಸಿಲುಕಿಕೊಂಡಿದೆ. ಹಾಗಾದರೆ ಏಕೆ ಪ್ರಶ್ನೆ ಹಾಕುತ್ತಿದ್ದೀಯಾ? ಇದೆಲ್ಲ ತರ್ಕಸಿದ್ಧಾಂತ. ಅವಿದ್ಯೆಯಿಂದಲೇ 'ನಾನು' ಉದ್ಭವಿಸುವುದು. ಅವಿದ್ಯೆ ನಾಶವಾದರೆ 'ನಾನು'ವಿನ ನಿವೃತ್ತಿಯಾಗುತ್ತದೆ. ವೇದಾಂತಿಗಳು ಹೇಳುತ್ತಾರೆ, ಆರೋಪಗಳೆಲ್ಲ (ಭ್ರಾಂತಿಯಿಂದ ಒಂದು ವಸ್ತುವಿನಲ್ಲಿ ಇನ್ನೊಂದನ್ನು ಕಾಣುವುದು) ಹೋದರೂ ಆರೋಪ